## ಪ್ರಾರ್ಥನೆ

(ಮಹಾನಿರ್ವಾಣತಂತ್ರದ ಬ್ರಹ್ಮಸ್ತೋತ್ರದಿಂದ)

ಪರೇಶ ಪ್ರಭೋ ಸರ್ವರೂಪಾವಿನಾಶಿನ್
ಅನಿರ್ದೇಶ್ಯ ಸರ್ವೇಂದ್ರಿಯಾಗಮ್ಯ ಸತ್ಯ ।
ಅಚಿಂತ್ಯಾಕ್ಷರ ವ್ಯಾಪಕವ್ಯಕ್ತತತ್ತ್ವ
ಜಗದ್ಭಾಸಕಾಧೀಶ ಪಾಯಾದಪಾಯಾತ್ ॥

ಹೇ ಪರೇಶ, ಪ್ರಭು, ವಿಶ್ವರೂಪ, ಅವಿನಾಶಿ, ಅನಿರ್ದೇಶ್ಯನೆ, ಇಂದ್ರಿಯಗಳ ದ್ವಾರಾ ಅಗಮ್ಯನೆ, ಸತ್ಯಸ್ವರೂಪ, ಅಚಿಂತ್ಯನೆ, ಅಕ್ಷರನೆ, ವ್ಯಾಪಕನೆ, ವ್ಯಕ್ತನೆ, ತತ್ತ್ವಸ್ವರೂಪನೆ, ಜಗತ್ಪ್ರಕಾಶಕ, ಅಧೀಶ್ವರ ನಮ್ಮನ್ನು ಅಪಾಯದಿಂದ ರಕ್ಷಿಸು.

ತದೇಕಂ ಸ್ಮರಾಮಸ್ತದೇಕಂ ಭಜಾಮ–
ಸ್ತದೇಕಂ ಜಗತ್ಸಾಕ್ಷಿರೂಪಂ ನಮಾಮಃ ।
ಸದೇಕಂ ನಿಧಾನಂ ನಿರಾಲಂಬಮೀಶಂ
ಭವಾಂಭೋಧಿಪೋತಂ ಶರಣ್ಯಂ ವ್ರಜಾಮಃ ॥

ಆ ಅದ್ವಿತೀಯವನ್ನೇ ಸ್ಮರಿಸುತ್ತೇವೆ, ಅದನ್ನೇ ಭಜಿಸುತ್ತೇವೆ; ಆ ಅದ್ವಿತೀಯವಾದ ಜಗತ್ಸಾಕ್ಷಿರೂಪವನ್ನೇ ನಮಿಸುತ್ತೇವೆ; ಸತ್ಸ್ವರೂಪವೂ, ಅದ್ವಿತೀಯವೂ, ನಿಧಾನವೂ, ನಿರಾಲಂಬವೂ, ಸಂಸಾರಸಾಗರವನ್ನು ದಾಟಲು ನಾವೆಯಂತಿರುವುದೂ, ಶರಣ್ಯವೂ ಆದ ಬ್ರಹ್ಮವಸ್ತುವಿನಲ್ಲಿ ಶರಣಾಗತರಾಗುತ್ತೇವೆ.

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಸರ್ವಸ್ಸದ್ಬುದ್ಧಿಮಾಪ್ನೋತು ಸರ್ವಃ ಸರ್ವತ್ರ ನಂದತು ॥

ಎಲ್ಲರೂ ಕಷ್ಟದಿಂದ ಪಾರಾಗಲಿ, ಎಲ್ಲರೂ ಶುಭವನ್ನು ನೋಡುವಂತಾಗಲಿ, ಎಲ್ಲರಿಗೂ ಸದ್ಬುದ್ಧಿಯುಂಟಾಗಲಿ, ಎಲ್ಲರೂ ಎಲ್ಲೆಲ್ಲಿಯೂ ಆನಂದದಿಂದಿರಲಿ.

ದುರ್ಜನಃ ಸಜ್ಜನೋ ಭೂಯಾತ್
ಸಜ್ಜನಃ ಶಾಂತಿಮಾಪ್ನುಯಾತ್ ।
ಶಾಂತೋ ಮುಚ್ಯೇತ ಬಂಧೇಭ್ಯೋ
ಮುಕ್ತಶ್ಚಾನ್ಯಾನ್ ವಿಮೋಚಯೇತ್ ॥

ದುರ್ಜನರು ಸಜ್ಜನರಾಗಲಿ, ಸಜ್ಜನರು ಶಾಂತಿಯನ್ನು ಪಡೆಯಲಿ, ಶಾಂತನು ಬಂಧನಗಳಿಂದ ಮುಕ್ತನಾಗಲಿ, ಮುಕ್ತನು ಇತರರನ್ನು ವಿಮೋಚನೆಗೊಳಿಸಲಿ.

## ಸೂಕ್ತಿಪ್ರಭ

- ಭಾವುಕನು ಬೇರೆಯವರನ್ನು ಸರಿದಾರಿಗೆ ತರಲು ತವಕಿಸುತ್ತಿರುತ್ತಾನೆ; ಜ್ಞಾನಿಯು ತನ್ನನ್ನು ಸರಿಪಡಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಾನೆ. —ಜೇಮ್ಸ್ ಅಲೆನ್
- ಎಲ್ಲದರ ಬಗ್ಗೆ ಎಲ್ಲವನ್ನೂ ತಿಳಿಯುವುದು ನಮ್ಮಿಂದ ಅಸಾಧ್ಯವಾದ್ದರಿಂದ ಎಲ್ಲದರ ಬಗ್ಗೆ ಕಿಂಚಿತ್ತಾದರೂ ತಿಳಿಯಲು ಪ್ರಯತ್ನಿಸಬೇಕು. —ಬ್ಲೇಸ್ ಪಾಸ್ಕಲ್
- ಆಪತ್ತುಗಳನ್ನು ಕುರುಡಾಗಿ ಉಪೇಕ್ಷಿಸುವುದು ಧೀರತನವಲ್ಲ; ನೇರವಾಗಿ ಎದುರಿಸಿ, ಅತಿಕ್ರಮಿಸುವುದು ನಿರ್ಭೀತಿಯ ಲಕ್ಷಣ. —ರಿಚರ್
- ಗೆಲ್ಲಬೇಕೆಂಬ ಇಚ್ಛಾಶಕ್ತಿಯು ಕಾರ್ಯರೂಪಕ್ಕೆ ಇಳಿದಾಗ ನಿರಂತರ ಪರಿಶ್ರಮವಾಗಿ ಪರಿಣಮಿಸುತ್ತದೆ. ಈ ಅಮೂಲ್ಯ ಶಕ್ತಿಯನ್ನು ಪಡೆದಿರುವವನು ಯಾವುದೇ ಸಮಸ್ಯೆಗೂ ಭಯಪಡಬೇಕಿಲ್ಲ. ಆ ಸಮಸ್ಯೆ ಎಷ್ಟು ಜಟಿಲವಾಗಿದ್ದರೂ, ಗಹನವಾಗಿದ್ದರೂ, ಈತ ಚಿಂತಿಸಲಾರ. —ತಿರುವಳ್ಳುವರ್
- ಮನುಕುಲವನ್ನು ಭಾವನಾತ್ಮಕವಾಗಿ ವಿನಾಶಗೊಳಿಸಬಲ್ಲ ಅತ್ಯಂತ ವ್ಯಾಪಕವಾದ ಮಹಾರೋಗವೇ ಏಕಾಂಗಿತನ. ಇದನ್ನು ಉಪೇಕ್ಷಿಸಲಾಗದು. ಜೀವನದುದ್ದಕ್ಕೂ ಒಂಟಿಯಾಗಿರುವುದು ಕಷ್ಟಸಾಧ್ಯ. ಇದನ್ನು ನೀಗಿಸಲು ಕೆಲವರು ಮದುವೆಯಾಗುತ್ತಾರೆ, ಗೆಳೆಯರನ್ನು ಆಶ್ರಯಿಸುತ್ತಾರೆ ಅಥವಾ ತಮ್ಮಲ್ಲಿರುವ ಕಲೆಗಳನ್ನು ಬೆಳೆಸಿಕೊಳ್ಳುತ್ತಾರೆ. —ಆಲನ್ ಫ್ರಮ್
- ಒಬ್ಬ ವ್ಯಕ್ತಿಗೆ ರೊಟ್ಟಿಯನ್ನು ಕೊಟ್ಟರೆ ಅವನು ಕೇವಲ ಒಂದು ದಿನ ಜೀವಿಸಬಲ್ಲ. ಅದಕ್ಕೆ ಬದಲು ಅವನಿಗೆ ವ್ಯವಸಾಯವನ್ನು ಕಲಿಸಿದರೆ ಜೀವನದುದ್ದಕ್ಕೂ ಸುಖವಾಗಿ ಜೀವಿಸಬಲ್ಲ. —ಅನಾಮಿಕ
- ರಾಷ್ಟ್ರೀಯ ಮಟ್ಟದ ಚಿಂತನೆ, ಯೋಜನೆ ಹಾಗು ಕ್ರಿಯೆಗಳಿಂದ ಮಾತ್ರ ರಾಷ್ಟ್ರೀಯ ಗೊಂದಲಗಳನ್ನು ಪರಿಹರಿಸಿ ಮುಂದಿನ ಪೀಳಿಗೆಗೆ ಆಗಬಹುದಾದ ಸಮಸ್ಯೆಗಳನ್ನು ನಿವಾರಿಸಬಹುದು. —ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್